MAY 08, 2025

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **‘ಆಪರೇ ’ನ್ ಸಿಂಧೂರ’**; ರಾಜ್ಯಾದ್ಯಂತ ಕಟ್ಟೆಚ್ಚರ, ಹಲವೆಡೆ ಅಣಕು ಕಾರ್ಯಾಚರಣೆ.
- **ಭಾರತೀಯ ಯೋಧರ ಕ್ಷೇಮಕ್ಕಾಗಿ,** ರಾಜ್ಯದ ಮುಜರಾಯಿ ದೇಗುಲಗಳಲ್ಲಿ, ವಿಶೇಷ ಪೂಜೆ.
- **ಧಾರವಾಡ ಐ.ಐ.ಟಿ.**; ಶೈಕ್ಷಣಿಕ ಹಾಗೂ ಮೂಲಸೌಕರ್ಯ ಸಾಮರ್ಥ್ಯ ವಿಸ್ತರಣೆಗೆ, ಕೇಂದ್ರ ಸಚಿವ ಸಂಪುಟ, ಅನುಮೋದನೆ.
- **ಹುಬ್ಬಳ್ಳಿ, ಧಾರವಾಡ ಪಾಲಿಕೆ;** ‘ಥ್ರೀ ಡೈಮೆನ್ಶನ್’ ಜಿ.ಐ.ಎಸ್. ಆಸ್ತಿ ಸಮೀಕ್ಷೆ ಪೂರ್ಣ.
- **ಇಂದು, ವಿಶ್ವ ರೆಡ್ ಕ್ರಾಸ್** ಹಾಗೂ ಥಲಸ್ಸೇಮಿಯಾ ದಿನಾಚರಣೆ.

<><><>

**ಈಗ ವಾರ್ತೆಗಳ ವಿವರ**

<><><>

**ಪಾಕಿಸ್ತಾನ ಆಕ್ರಮಿತ ಕಾಶ್ಮೀರದ** ಉಗ್ರಗಾಮಿಗಳ ನೆಲೆಗಳನ್ನು ನಾಶಗೊಳಿಸಿ, ನಮ್ಮ ಯೋಧರು ಪರಾಕ್ರಮ ಮೆರೆದಿದ್ದಾರೆ; ಸೇನಾ ಪಡೆಯ ಧೀರೋದಾತ್ತ ಸಾಧನೆಗೆ, ತಾವು ಮತ್ತು ದೇಶದ ಜನ ಹೆಮ್ಮೆ ಪಡುತ್ತೇವೆ. ರಾಜ್ಯದ ಪರವಾಗಿ ಅಭಿನಂದನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಅಭಿಮಾನ ವ್ಯಕ್ತ ಪಡಿಸಿದ್ದಾರೆ. ಮುಖ್ಯಮಂತ್ರಿಯವರ ಬೆಂಗಳೂರಿನ ಗೃಹ ಕಚೇರಿ ಕಾವೇರಿಯಲ್ಲಿ ಅವರು ಸುದ್ದಿಗೋಷ್ಠಿ ನಡೆಸಿದರು. ‘ಆಪರೇ ’ನ್ ಸಿಂಧೂರ’ ಮೂಲಕ, ಉಗ್ರಗಾಮಿಗಳ ಒಂಬತ್ತು ನೆಲೆಗಳನ್ನು ಗುರಿಯಾಗಿಸಿ, ನಾಶಗೊಳಿಸಿ, ಅಮಾಯಕ ಜನರ ಸಾವು ನೋವು ತಪ್ಪಿಸಿದ, ನಮ್ಮ ಸೈನಿಕರ ಕಾರ್ಯದಕ್ಷತೆ ಅಭಿಮಾನ ಪಡುವಂಥದ್ದು ಎಂದಿದ್ದಾರೆ. ಕೇಂದ್ರ ಸರ್ಕಾರದೊಂದಿಗೆ ತಾವು ನಿರಂತರ ಸಂಪರ್ಕದಲ್ಲಿದ್ದು, ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದ್ದು, ರಾಜ್ಯದಲ್ಲಿ ಸುರಕ್ಷತೆಯ ದೃಷ್ಟಿಯಿಂದ, ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿದ್ದಾಗಿ, ಮುಖ್ಯಮಂತ್ರಿ ಎಂದು ತಿಳಿಸಿದರು.

<><><>

**ಬೆಂಗಳೂರು ನಗರದ, 35 ಸ್ಥಳಗಳಲ್ಲಿ** ಜಾಗೃತಿ ಶಬ್ದ ಮೊಳಗಿಸಿ, ಅಣಕು ಪ್ರದರ್ಶನ ಹಾಗೂ ಹಲಸೂರು ಕೆರೆಯಲ್ಲಿ, ಬೋಟಿಂಗ್ ರಕ್ಷಣಾ ಕಾರ್ಯದ ಅಣಕು ಕಾರ್ಯಾಚರಣೆ ನಡೆಯಿತು.

<><><>

**ಈ ಮಧ್ಯೆ, ರಾಜ್ಯದ ಕರಾವಳಿ ಭಾಗಗಳಲ್ಲಿ** ಕಠಿಣ ಭದ್ರತಾ ವ್ಯವಸ್ಥೆ ಕೈಗೊಳ್ಳಲಾಗಿದೆ. ಕರಾವಳಿ ಕಾವಲು ಪಡೆ, ತೀವ್ರ ಕಟ್ಟೆಚ್ಚರ ವಹಿಸಿ, ಕಾರ್ಯನಿರ್ವಹಿಸುತ್ತಿದ್ದು, ಹಿಂದು ಮಹಾಸಾಗರದಲ್ಲಿ ನಿಗಾ ವಹಿಸಿದೆ.

<><><>

**'ಆಪರೇಷನ್ ಸಿಂಧೂರ'**, ಪಾಕಿಸ್ಥಾನ ಆಕ್ರಮಿತ ಕಾಶ್ಮೀರದ ಭಯೋತ್ಪಾದಕರ ಅಡಗು ತಾಣಗಳ ಮೇಲೆ, ಯಶಸ್ವಿ ಸೇನಾ ಕಾರ್ಯಾಚರಣೆ ಕೈಗೊಂಡು, 9 ಉಗ್ರ ನೆಲೆಗಳನ್ನು ಧ್ವಂಸಗೊಳಿಸಿದ ಹಿನ್ನೆಲೆ, ರಾಜ್ಯದ ಎಲ್ಲ ಮುಜರಾಯಿ ಇಲಾಖೆ ದೇವಸ್ಥಾನಗಳಲ್ಲಿ, ವಿಶೇಷ ಪೂಜೆ ಸಲ್ಲಿಸಿ, ಯೋಧರ ಸುರಕ್ಷತೆಗಾಗಿ ಪ್ರಾರ್ಥಿಸುವಂತೆ, ರಾಜ್ಯ ಸರ್ಕಾರ ಸೂಚಿಸಿದೆ. ಮುಜರಾಯಿ ಖಾತೆ ಸಚಿವ ರಾಮಲಿಂಗಾರೆಡ್ಡಿ, ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ತಿಳಿಸಿ, ಧಾರ್ಮಿಕ ದತ್ತಿ ಇಲಾಖೆಯ, ಎಲ್ಲ ದೇವಾಲಯಗಳಲ್ಲಿ, ಭಾರತೀಯ ಸೇನೆಯ ಹೆಸರಿನಲ್ಲಿ ಹಾಗೂ ಭಾರತೀಯ ಯೋಧರಿಗೆ ಒಳಿತಾಗಲಿ ಎಂದು ಹಾರೈಸಿ, ಸೇನೆಗೆ ಮತ್ತ ಷ್ಟ ಶಕ್ತಿಯನ್ನು ಅನುಗ್ರಹಿಸಲಿ ಎಂದು ಪ್ರಾರ್ಥಿಸಿ, ವಿಶೇ ' ಸಂಕಲ್ಪದೊಂದಿಗೆ ಪೂಜೆ ನೆರವೇರಿಸಲು ಕ್ರಮ ಕೈಗೊಳ್ಳುವಂತೆ, ಸೂಚಿಸಿದ್ದಾಗಿ, ತಿಳಿಸಿದ್ದಾರೆ.

<><><>

**'ಆಪರೇಷನ್ ಸಿಂಧೂರ' ಹಿನ್ನೆಲೆ,** ಚಿಕ್ಕಮಗಳೂರಿನ ಶಾರದಾ ಮಂದಿರದಲ್ಲಿ, ಶಾಸಕ ಸಿ.ಟಿ. ರವಿ ನೇತೃತ್ವದಲ್ಲಿ, ಬಿಜೆಪಿ ಕಾರ್ಯಕರ್ತರು, ಸೇನಾ ಪಡೆಗಳ ಯೋಧರ ಕ್ಷೇಮ ಪ್ರಾರ್ಥಿಸಿ, ಪೂಜೆ ಸಲ್ಲಿಸಿದರು.

<><><>

**ಶ್ರೀ ರಾಮ ಸೇನೆ ಅಧ್ಯಕ್ಷ,** ಪ್ರಮೋದ ಮುತಾಲಿಕ ಅವರ ಸಾರಥ್ಯದಲ್ಲಿ, ಹುಬ್ಬಳ್ಳಿಯಲ್ಲಿ, 'ಆಪರೇಷನ್ ಸಿಂಧೂರ' ಹಿನ್ನೆಲೆ, ವಿಜಯೋತ್ಸವ ಜರುಗಿತು.

<><><>

**ಬೆಳಗಾವಿಯಲ್ಲಿ ಮಾಜಿ ಸೈನಿಕರ** ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು, 9 ಭಯೋತ್ಪಾದಕರ ಅಡಗುದಾಣಗಳನ್ನು ಧ್ವಂಸಗೊಳಿಸಿದ ಹಿನ್ನೆಲೆ, ಸಿಹಿ ಹಂಚಿ ಸಂಭ್ರಮಾಚರಿಸಿದರು.

<><><>

**ಯಶಸ್ವಿ ಸೇನಾ ಕಾರ್ಯಾಚರಣೆ ಹಿನ್ನೆಲೆ,** ಕಸ್ತೂರಿ ಕರ್ನಾಟಕ ಜನಪರ ವೇದಿಕೆಯ ಕಾರ್ಯಕರ್ತರು, ರಾಮನಗರ ಜಿಲ್ಲೆ, ಚನ್ನಪಟ್ಟಣದಲ್ಲಿ ವಿಜಯೋತ್ಸವ ಆಚರಿಸಿದರು.

<><><>

**ಪ್ರತಿಕೂಲ ಹಾಗೂ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ,** ನಾಗರಿಕರ ಪ್ರಾಣ ರಕ್ಷಣೆ, ಹಾನಿಯ ಸಮರ್ಥ ನಿಯಂತ್ರಣ, ಸಶಸ್ತ್ರ ಪಡೆಗಳ ಕಾರ್ಯದಕ್ಷತೆ ಬಲಪಡಿಸುವುದು ಸೇರಿದಂತೆ, ಮುಂಜಾಗ್ರತಾ ಕ್ರಮವಾಗಿ, ರಾಯಚೂರ ಜಿಲ್ಲೆಯಲ್ಲಿ ನಾಗರಿಕ ರಕ್ಷಣಾ ಸಿದ್ಧತೆ ಕಾರ್ಯಾಚರಣೆ, ಜರುಗಿತು. ರಾಯಚೂರ ಜಿಲ್ಲಾ ಉಸ್ತುವಾರಿ ಸಚಿವ ಶರಣಪ್ರಕಾಶ ಪಾಟೀಲ, ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ತುರ್ತು ಪರಿಸ್ಥಿತಿಯ ಮುಂಜಾಗ್ರತೆ ಕಾರ್ಯಾಚರಣೆ ಹಿನ್ನೆಲೆ, ನಾಗರಿಕರು ಆತಂಕಕ್ಕೆ ಒಳಗಾಗಬಾರದು; ಸಹಕರಿಸಬೇಕು ಎಂದು, ಜಿಲ್ಲೆಯ ಜನತೆಯಲ್ಲಿ ಮನವಿ ಮಾಡಿದರು. ಎಲ್ಲ ಜನಪ್ರತಿನಿಧಿಗಳು, ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತದ ಅಧಿಕಾರಿಗಳು, ತಮ್ಮ ಕೇಂದ್ರ ಸ್ಥಾನಗಳಲ್ಲಿ, ಸರ್ವಸನ್ನದ್ಧ ಸ್ಥಿತಿಯಲ್ಲಿರುವಂತೆ, ಸೂಚಿಸಿದರು.

<><><>

**ಆಂಧ್ರ ಪ್ರದೇಶದ, ಕಡಪ ಮೂಲದ,** 30ಕ್ಕೂ ಅಧಿಕ ಸಿವಿಲ್ ಡಿಫೆನ್ಸ್ ಪರಿಣಿತರ ತಂಡ, ರೇಲ್ವೆ ನಿಲ್ದಾಣದಲ್ಲಿ, ಅಣಕು ಕಾರ್ಯಾಚರಣೆ ನಡೆಸಿತು.

<><><>

**ಪೆಹಲ್ಗಾಮ್ ಭಯೋತ್ಪಾದಕರ ದಾಳಿ** ಹಾಗೂ ಬಳಿಕ, ಸೂಕ್ತ ಪ್ರತ್ಯುತ್ತರ ನೀಡಲಾದ, 'ಆಪರೇಷನ್ ಸಿಂಧೂರ್' ಸೇನಾ ಕಾರ್ಯಾಚರಣೆ ಹಿನ್ನೆಲೆ, ತುರ್ತು ಸಂದರ್ಭದಲ್ಲಿ, ನಾಗರಿಕರ ರಕ್ಷಣೆಗಾಗಿ, ಕೇಂದ್ರ ಗೃಹ ಸಚಿವಾಲಯದ ನಿರ್ದೇಶನದ ಮೇರೆಗೆ, ಮೈಸೂರು ಜಿಲ್ಲೆಯಲ್ಲಿ, 12 ತಂಡಗಳನ್ನು ರಚಿಸಲಾಗಿದೆ ಎಂದು, ಅಪರ ಜಿಲ್ಲಾಧಿಕಾರಿ ಪಿ. ಶಿವರಾಜು ತಿಳಿಸಿದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ, ಅವರು ಪೂರ್ವಭಾವಿ ಸಿದ್ಧತಾ ಸಭೆ ನಡೆಸಿದರು. ಮೈಸೂರು ಜಗತ್ ಪ್ರಸಿದ್ಧ ಪ್ರವಾಸಿ ಕೇಂದ್ರವಾಗಿದ್ದು, ಆಕಾಶವಾಣಿ ಸೇರಿದಂತೆ, ಎಲ್ಲ ಇಲಾಖೆಗಳನ್ನು ಒಳಗೊಂಡ, 12 ತುರ್ತು ಸೇವಾ ತಂಡಗಳನ್ನು, ಜಿಲ್ಲಾಡಳಿತ ರಚಿಸಿದೆ ಎಂದು, ಹೇಳಿದರು.

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ**

**ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.**

<><><>

**ವಿಶ್ವದಾದ್ಯಂತ ವಿಪತ್ತು ಹಾಗೂ ಸಂಘರ್ಷದ** ಸಮಯದಲ್ಲಿ, ಅಗತ್ಯ ವೈದ್ಯಕೀಯ ನೆರವು ನೀಡುತ್ತಿರುವ ಸಂಸ್ಥೆ, ರೆಡ್ ಕ್ರಾಸ್. ಇಂದು, ವಿಶ್ವ ರೆಡ್ ಕ್ರಾಸ್ ದಿನ. "ಮಾನವೀಯತೆಯ ಕಡೆಗೆ" ಎಂಬ ಧ್ಯೇಯದೊಂದಿಗೆ, ಆಚರಿಸಲಾಗುತ್ತಿದೆ.

<><><>

**ವಿಶ್ವ ರೆಡ್ ಕ್ರಾಸ್ ದಿನಾಚರಣೆ ಹಿನ್ನೆಲೆ,** ಬೆಂಗಳೂರಿನಲ್ಲಿ ಇಂದು ಬೆಳಗ್ಗೆ 11 ಗಂಟೆಗೆ, ಆರೋಗ್ಯ ಖಾತೆ ಸಚಿವ ದಿನೇಶ್ ಗುಂಡೂರಾವ್ ಅವರು, ಪವರ್ ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ ಕೊಡುಗೆ ನೀಡಿರುವ ಆಂಬುಲೆನ್ಸ್ ವಾಹನ, ಲೋಕಾರ್ಪಣೆ ಗೊಳಿಸುವರು.

<><><>

**ವಿಶ್ವ ರೆಡ್ ಕ್ರಾಸ್ ಹಾಗೂ ರೆಡ್ ಕ್ರಸೆಂಟ್** ದಿನಾಚರಣೆಯ ಮಹತ್ವ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ರಾಜ್ಯ ರೆಡ್ ಕ್ರಾಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎಚ್.ಎಸ್ ಬಾಲಸುಬ್ರಹ್ಮಣ್ಯ.

<><><>

**ಎಚ್.ಎಸ್ ಬಾಲಸುಬ್ರಹ್ಮಣ್ಯ ಧ್ವನಿ 50 ಸೆಕೆಂದುಗಳು**

<><><>

**ಇಂದು, ಅಂತಾರಾಷ್ಟ್ರೀಯ ಥಲಸ್ಸೇಮಿಯಾ ಜಾಗೃತಿ ದಿನ.** 'ಥಲಸ್ಸೇಮಿಯಾಕ್ಕಾಗಿ ಒಗ್ಗೂಡೋಣ; ಸಮುದಾಯವನ್ನು ಸಂಘಟಿಸೋಣ; ಪೀಡಿತರಿಗೆ ಆದ್ಯತೆ ನೀಡೋಣ' ಎಂಬ ಧ್ಯೇಯದೊಂದಿಗೆ, ಆಚರಿಸಲಾಗುತ್ತಿದೆ.

<><><>

**ಧಾರವಾಡದ, ಭಾರತೀಯ ತಂತ್ರಜ್ಞಾನ ಸಂಸ್ಥೆ,** ಐ.ಐ.ಟಿ. ಸೇರಿದಂತೆ, ದೇಶದ ಐದು ಭಾರತೀಯ ತಂತ್ರಜ್ಞಾನ ಸಂಸ್ಥೆಗಳ, ಶೈಕ್ಷಣಿಕ ಮತ್ತು ಮೂಲಸೌಕರ್ಯ ಸಾಮರ್ಥ್ಯ ವಿಸ್ತರಣೆಗೆ, ಕೇಂದ್ರ ಸಚಿವ ಸಂಪುಟ ಅನುಮೋದಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ, ಹೊಸ ದಿಲ್ಲಿಯಲ್ಲಿ ನಡೆದ, ಕೇಂದ್ರ ಸಚಿವ ಸಂಪುಟ ಸಭೆ, ದೇಶದ ಐದು ನೂತನ ಐ.ಐ.ಟಿ.ಗಳ ಶೈಕ್ಷಣಿಕ ಮತ್ತು ಮೂಲಸೌಕರ್ಯ ಸಾಮರ್ಥ್ಯ ವಿಸ್ತರಣೆಗೆ, 'ಬಿ' ಹಂತದ ನಿರ್ಮಾಣ ಯೋಜನೆಗೆ, ಅನುಮೋದನೆ ನೀಡಿದೆ. ಉನ್ನತ ಶಿಕ್ಷಣ ಸಂಸ್ಥೆ, ಐ.ಐ.ಟಿ.ಗಳಲ್ಲಿ 6 ಸಾವಿರದ 500ಕ್ಕೂ ಹೆಚ್ಚು ವಿದ್ಯಾರ್ಥಿಗಳ ಅಧ್ಯಯನಕ್ಕೆ, ಹೊಸ ವಿಸ್ತರಣೆ ಯೋಜನೆ, ಅನುಕೂಲ ಕಲ್ಪಿಸಲಿದೆ. ಉದ್ಯಮ, ಶೈಕ್ಷಣಿಕ ಸಂಪರ್ಕವನ್ನು ಬಲಪಡಿಸಲು, ಐದು ಹೊಸ ಅತ್ಯಾಧುನಿಕ ಸಂಶೋಧನಾ ಪಾರ್ಕ್‌ಗಳನ್ನು ಸಹ ಅಭಿವೃದ್ಧಿಪಡಿಸಲು, ಯೋಜಿಸಲಾಗಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಿಂದ, 2028–29ರ ವರೆಗಿನ, ನಾಲ್ಕು ವ ್ಷಗಳ ಅವಧಿಯಲ್ಲಿ, ಒಟ್ಟು 11 ಸಾವಿರದ 828 ಕೋಟಿ 79 ಲಕ್ಷ ರೂಪಾಯಿ ವೆಚ ಅಂದಾಜಿಸಲಾಗಿದೆ. ಐದು ಐ.ಐ.ಟಿ. ಗಳಲ್ಲಿ 130, ಹಂತ 14 ಮತ್ತು ಅದಕ್ಕಿಂತ ಹೆಚ್ಚಿನ ಪ್ರಾಧ್ಯಾಪಕರ ಹುದ್ದೆಗಳನ್ನು, ಸೃಷ್ಟಿಸಲು ಸಂಪುಟ ಅನುಮೋದನೆ ನೀಡಿದೆ.

<><><>

**ಇದೇ ಸಂದರ್ಭದಲ್ಲಿ, 'ಆಪರೇ ನ್ ಸಿಂಧೂರ್' ಕಾರ್ಯಾಚರಣೆ ಕುರಿತು,** ಸಚಿವ ಸಂಪುಟಕ್ಕೆ ಮಾಹಿತಿ ನೀಡಿದ ಪ್ರಧಾನಮಂತ್ರಿ, ಸಶಸ್ತ್ರ ಪಡೆಗಳ ಯಶಸ್ವಿ ಉಗ್ರರ ದಮನ ಕಾರ್ಯಾಚರಣೆಯನ್ನು, ಹೆಮ್ಮೆಯಿಂದ ಶ್ಲಾಘಿಸಿದರು. ಪೆಹಲ್ಗಾಮ್ ಭಯೋತ್ಪಾದನಾ ದಾಳಿಯ ಕೃತ್ಯಕ್ಕೆ ತಕ್ಕ ಪ್ರತ್ಯುತ್ತರ ನೀಡಿದ ಬಗ್ಗೆ, ನರೇಂದ್ರ ಮೋದಿ, ವಿವರಿಸಿದರು.

<><><>

**ಕರ್ನಾಟಕದ ಧಾರವಾಡ ಐ.ಐ.ಟಿ.** ಸೇರಿದಂತೆ, ದೇಶದ ಐದು ಐ.ಐ.ಟಿ. ಗಳಲ್ಲಿನ ಮೂಲಸೌಕರ್ಯ ಹಾಗೂ ಶೈಕ್ಷಣಿಕ ಸಾಮರ್ಥ್ಯವನ್ನು ಹೆಚ್ಚಿಸಲು, ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದ್ದಕ್ಕೆ, ಪ್ರಧಾನಮಂತ್ರಿ ಅವರನ್ನು ಅಭಿನಂದಿಸಿದ್ದಾಗಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ತಿಳಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ಪ್ರಕಟಿಸಿರುವ ಸಚಿವರು, ನೂತನ ಐದು ಐ.ಐ.ಟಿ.ಗಳನ್ನು ಉನ್ನತೀಕರಿಸಿ, ಹೆಚ್ಚುವರಿಯಾಗಿ, 6 ಸಾವಿರದ ಐನೂರು ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲ ಕಲ್ಪಿಸಿರುವುದು, ದೂರದೃಷ್ಟಿಯ ನಿರ್ಣಯ, ಎಂದಿದ್ದಾರೆ.

<><><>

**ಹುಬ್ಬಳ್ಳಿ, ಧಾರವಾಡ ಮಹಾನಗರ ಪಾಲಿಕೆ,** ರಾಜ್ಯದಲ್ಲೇ ಪ್ರಥಮ ಬಾರಿಗೆ, ಆಸ್ತಿಗಳನ್ನು ನಿಖರವಾಗಿ ಗುರುತಿಸಲು, 'ಥ್ರೀ ಡೈಮೆನ್ಶನ್' ಭೌಗೋಳಿಕ ಮಾಹಿತಿ ವ್ಯವಸ್ಥೆ, ಜಿ.ಐ.ಎಸ್. ಸರ್ವೆ ಕೈಗೊಂಡಿದೆ. ಕಳೆದ ಏಪ್ರಿಲ್ 24 ರಿಂದ ಮೇ 4ರ ವರೆಗೆ, ಹತ್ತು ದಿನಗಳ ಕಾಲ, ಲೀಡರ್ ಸೆನ್ಸರ್ ಅಳವಡಿಸಿದ ವಿಮಾನಗಳು, ಅವಳಿ ನಗರದ ಆಗಸದಲ್ಲಿ ಹಾರಾಡಿ, ವೈಮಾನಿಕ ಸಮೀಕ್ಷೆಯನ್ನು ಯಶಸ್ವಿಯಾಗಿ, ಕೈಗೊಂಡಿವೆ. ಅಪರ ಆಯುಕ್ತ ಆರ್. ವಿಜಯಕುಮಾರ, ಆಯುಕ್ತ ರುದ್ರೇಶ್ ಘಾಳಿ ಅವರು, ಪಾಲಿಕೆಯ ತಂಡದೊಂದಿಗೆ, ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ತೆರಳಿ, ವೈಮಾನಿಕ ಸಮೀಕ್ಷಾ ಕಾರ್ಯ ಪರಿಶೀಲಿಸಿದರು.

<><><>

**3–ಡಿ ಜಿ.ಐ.ಎಸ್. ಯೋಜನೆಗಾಗಿ,** 23 ಕೋಟಿ 50 ಲಕ್ಷ ರೂಪಾಯಿಯನ್ನು, ಮುಂಬೈ ಮೂಲದ ಜೆನಿಸಸ್ ಇಂಟರ್ ನ್ಯಾ ನಲ್ ಕಂಪನಿಗೆ, ಪಾವತಿಸಲಾಗಿದೆ.

<><><>

**ಈಗ ಸಂಕ್ಷಿಪ್ತ ಸುದ್ದಿಗಳು**

<><><>

**ಉಪ ಮುಖ್ಯಮಂತ್ರಿ, ಡಿ.ಕೆ.ಶಿವಕುಮಾರ,** ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಖಾತೆ ಸಚಿವ, ನಿತಿನ್ ಗಡ್ಕರಿ ಅವರನ್ನು, ಹೊಸ ದಿಲ್ಲಿಯಲ್ಲಿ ಭೇಟಿ ಮಾಡಿ, ಸಮಾಲೋಚಿಸಿದರು.

<><><>

**ಕಲಬುರಗಿ ಜಿಲ್ಲೆ, ಮಳಖೇಡದ,** ರಾಜಶ್ರೀ ಅಲ್ಟ್ರಾಟೆಕ್ ಸಿಮೆಂಟ್ ಕಾರ್ಖಾನೆಯ, ಕಾರ್ಮಿಕರ ಸಮಸ್ಯೆಗಳ ಬಗ್ಗೆ, ಸಚಿವ ಸಂತೋಷ ಲಾಡ, ಬೆಂಗಳೂರಿನಲ್ಲಿ ಚರ್ಚಿಸಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು**

<><><>

- **'ಆಪರೇ 'ನ್ ಸಿಂಧೂರ';** ರಾಜ್ಯಾದ್ಯಂತ ಕಟ್ಟೆಚ್ಚರ, ಹಲವೆಡೆ ಅಣಕು ಕಾರ್ಯಾಚರಣೆ.
- **ಭಾರತೀಯ ಯೋಧರ ಕ್ಷೇಮಕ್ಕಾಗಿ,** ರಾಜ್ಯದ ಮುಜರಾಯಿ ದೇಗುಲಗಳಲ್ಲಿ, ವಿಶೇಷ ಪೂಜೆ.
- **ಧಾರವಾಡ ಐ.ಐ.ಟಿ.;** ಶೈಕ್ಷಣಿಕ ಹಾಗೂ ಮೂಲಸೌಕರ್ಯ ಸಾಮರ್ಥ್ಯ ವಿಸ್ತರಣೆಗೆ, ಕೇಂದ್ರ ಸಚಿವ ಸಂಪುಟ, ಅನುಮೋದನೆ.
- **ಹುಬ್ಬಳ್ಳಿ, ಧಾರವಾಡ ಪಾಲಿಕೆ;** 'ಥ್ರೀ ಡೈಮೆನ್ಶನ್' ಜಿ.ಐ.ಎಸ್. ಆಸ್ತಿ ಸಮೀಕ್ಷೆ ಪೂರ್ಣ.
- **ಇಂದು, ವಿಶ್ವ ರೆಡ್ ಕ್ರಾಸ್ ಹಾಗೂ** ಥಲಸ್ಸೇಮಿಯಾ ದಿನಾಚರಣೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>